ಸುಖಕ್ಕಾಗಿ ಹಪಹಪಿಸುವುದು ಮನುಷ್ಯನ ಸಹಜ ಪ್ರಕೃತಿ. ಸುಖ ಪ್ರಾಪ್ತಿಗಾಗಿ ಮನುಷ್ಯ ಯಾವ ಮಾರ್ಗವನ್ನೂ ಹಿಡಿಯಲು ಸಿದ್ಧ. ದೈಹಿಕ ಶ್ರಮ ಬೇಡುವ ಕೆಲಸದಲ್ಲಿ (ಕ್ರೀಡೆ, ವ್ಯಾಯಾಮ ಇತ್ಯಾದಿ) ತನ್ನನ್ನು ತೊಡಗಿಸಿಕೊಳ್ಳುವುದು, ಲೈಂಗಿಕ ಕ್ರಿಯೆ, ಇಷ್ಟದ ಆಹಾರ ಸೇವನೆ, ಮಾದಕದ್ರವ್ಯದ ಮೊರೆ ಹೋಗುವುದು ಇತ್ಯಾದಿಗಳೆಲ್ಲ ಸುಖದ ಅನ್ವೇಷಣೆಯಲ್ಲಿ ಕಂಡುಕೊಂಡ ದಾರಿಗಳೇ ಆಗಿವೆ. ಸಹಜೀವನ, ಪ್ರೀತಿ, ಧರ್ಮಕಾರ್ಯ, ಇತರರಿಗೆ ಸಹಾಯ ಮಾಡುವುದರಲ್ಲೂ ಆ ಸುಖವನ್ನು ಮನುಷ್ಯ ಪಡೆಯಬಲ್ಲ. ಬಹುಸಂಖ್ಯಾತ ಜನರ ಪ್ರಾಣಿ, ಸಸ್ಯಗಳೆಡೆಗಿನ ಪ್ರೀತಿಯ ಮೂಲವಿರುವುದು ಇಲ್ಲಿಯೇ.

'ನಿಜವಾದ ಸುಖವೆಂದರೆ ಆತ್ಮಸ್ಥ ಸುಖ ಮಾತ್ರ. ಮನುಷ್ಯ ಸುಖಕ್ಕಾಗಿ ಹಂಬಲಿಸುವುದು ಆತ್ಮವನ್ನು ಕುರಿತು ಹಂಬಲಿಸಿದಂತೆಯೇ ಆದರೂ ಅದರ ಅರಿವಿಲ್ಲದೇ ಆತ ಬಾಧೆ ಪಡುತ್ತಾನೆ. ನಿಜಾತ್ಮವು ಅಳಿದುಹೋಗದಂಥದ್ದು. ಆದ್ದರಿಂದ ಮನುಷ್ಯನು ಆತ್ಮಸ್ಥ ಸುಖವನ್ನು ಪಡೆದಾಗ, ಶಾಶ್ವತ ಸುಖವನ್ನು ಹೊಂದುತ್ತಾನೆ. ಆ ನಿಜ ಸುಖದ ಅರಿವಿಲ್ಲದೇ ಪ್ರತಿಯೊಬ್ಬನೂ ಅರಿತೋ ಅರಿಯದೆಯೋ ಅದರ ಹುಡುಕಾಟದಲ್ಲೇ ಜೀವನಪೂರ್ತಿ ಅಸುಖಿಯಾಗಿಯೇ ಇರುತ್ತಾನೆ' ಎನ್ನುತ್ತಾರೆ ರಮಣ ಮಹರ್ಷಿಗಳು. ಹೀಗಾಗಿ, ದೇಹಸ್ಥ ಸುಖವೇ ನಿಜಸುಖವೆಂಬ ತಿಳಿವಳಿಕೆಯಿಂದ ಮನುಷ್ಯ ಅದನ್ನು ದಕ್ಕಿಸಿಕೊಳ್ಳಲೋಸುಗ ಪಾಪವನ್ನೂ ಮಾಡಬಲ್ಲ, ಪ್ರಾಣಿಗಳನ್ನೂ ಪ್ರೀತಿಸಬಲ್ಲ. ಎರಡರ ಗುರಿಯೂ ಒಂದೇ, ಮಾರ್ಗಗಳು ಬೇರೆ ಬೇರೆ ಅಷ್ಟೇ. ಒಂದು, ಸಾತ್ವಿಕ ಮಾರ್ಗ; ಇನ್ನೊಂದು, ತಾಮಸ ಮಾರ್ಗ ಎಂದು ನಾವು ವಿಂಗಡಿಸಿಕೊಳ್ಳಬೇಕಷ್ಟೇ. ಯಾವುದರಲ್ಲೂ ಆತನಿಗೆ ಅನವರತ ಸುಖ ಲಭ್ಯವಾಗದ ಕಾರಣ ಆತನ ಈ ಎಲ್ಲ ಕ್ರಿಯೆಗಳು ಸಾರ್ವಕಾಲಿಕವಾಗಿ ಸಾಗುತ್ತಲೇ ಇರುತ್ತದೆ.

***

ಕೊನೆಯಲ್ಲೊಂದು ಘಟನೆಯನ್ನು ನೆನಪಿಸಿಕೊಳ್ಳುತ್ತ ಈ ಲೇಖನ ಮುಗಿಸುತ್ತೇನೆ. ಮೊನ್ನೆ ಬಿಳಿಗಿರಿ ರಂಗನ ದರ್ಶನ ಮುಗಿಸಿ ಕೆಳಗಿಳಿಯುತ್ತಿರುವ ಸಂದರ್ಭದಲ್ಲಿ, ಗಂಡ–ಹೆಂಡತಿ ಹಾಗೂ ಪ್ರೈಮರಿ ಶಾಲೆ ಓದುತ್ತಿರುವ ವಯಸ್ಸಿನ ಮಗನನ್ನೊಳಗೊಂಡ ಕುಟುಂಬವೊಂದು ದಾರಿಯ ಅಕ್ಕಪಕ್ಕ ಸುಳಿದಾಡುವ ಮಂಗಗಳಿಗೆ ತಿನ್ನಲು ನೀಡುತ್ತ ಖುಷಿ ಪಡುತ್ತಿದ್ದರು. ತಮ್ಮ ಕೈಲಿದ್ದ ಆಹಾರ ಖಾಲಿಯಾಗುತ್ತಲೇ, ಆ ಗಂಡಸು ಹತ್ತಿರದ ಅಂಗಡಿಯಿಂದ ಏನಾದರೂ ಖರೀದಿಸಿ ತರುವಂತೆ ಮಗನನ್ನು ಕಳಿಸಿದ. ಅವನು ಜಿಗಿಜಿಗಿದು ಹೋಗಿ ಮೂರ್ನಾಲ್ಕು ಬಾಳೆಹಣ್ಣು, ಪೇರಲಗಳನ್ನು ತಂದ. ಅದನ್ನೂ ಹೆಮ್ಮೆಯಿಂದ ಮಂಗಗಳಿಗೆ ತಿನ್ನಿಸಿ ತೃಪ್ತಿಯಾದ ನಂತರ ಮೆಟ್ಟಿಲುಗಳನ್ನಿಳಿಯುತ್ತಿರುವಾಗ, ಅಲ್ಲೇ ಪಕ್ಕದಲ್ಲಿ ಕೂಗಿ ಕರೆಯುತ್ತಿರುವ ಭಿಕ್ಷುಕರನ್ನು ಗಮನಿಸಿಯೂ ಅತ್ತ ದೃಷ್ಟಿ ಹರಿಸದೇ, ತಲೆಯೆತ್ತಿ ನೇರ ನೋಡುತ್ತ ತನ್ನ ಕಾರಿನತ್ತ ಧಾವಿಸಿದ ಆತ. ತನ್ನ ಕಾರಿನವರೆಗೂ ಹಿಂಬಾಲಿಸಿ ಬಂದ ಬೇಡುವ ಬಾಲಕನನ್ನು ದೂರ ಸರಿಯುವಂತೆ ಬೈದು ಕಾರಿನ ಬಾಗಿಲು ಹಾಕಿಕೊಂಡ.

ಆತ ಬೆಲ್ಟ್ ಧರಿಸಿ, ತಂಪು ಕನ್ನಡಕ ಏರಿಸಿ, ಹಿಂದೆಮುಂದೆ ನೋಡುತ್ತ ಕಾರನ್ನು ಪಾರ್ಕಿಂಗ್ ಜಾಗದಿಂದ ಹಿಂದೆಗೆಯುವಷ್ಟರಲ್ಲಿ, ಹಿಂದಿನ ಸೀಟಿನಲ್ಲಿ ಕುಳಿತಿದ್ದ ಆತನ ಮಗ ಟ್ಯಾಬ್‌ನಲ್ಲಿ ಯಾವುದೋ ಆಟ ಆಡಲು ಶುರುಮಾಡಿದ್ದ. ಆಕ್ಷಣಕ್ಕೆ, ಕಾಡಿನಲ್ಲಿ ಸಂಚರಿಸುತ್ತ ಎದುರು ಸಿಕ್ಕ ಪ್ರಾಣಿಗಳನ್ನು ಕೋವಿಯಿಂದ 'ಡಿಶುಂ... ಡಿಶುಂ...' ಎಂದು ಶೂಟ್ ಮಾಡುವ ಯಾವುದಾದರೂ ಹಂಟಿಂಗ್ ಗೇಮನ್ನೇ ಅವನು ಆಡುತ್ತಿರಬಹುದು ಎಂದೆನಿಸಿಬಿಟ್ಟಿತು ನನಗೆ!

'ಎಲ್ಲದರಲ್ಲೂ ನೆಗೆಟಿವ್ ಛಾಯೆಯನ್ನೇ ಕಾಣುವ ನಿನಗೆ ಇಂಥಾ ಆಲೋಚನೆಗಳೇ ಬರುವುದು. ಅವನು ಬೇರೆ ಯಾವುದೋ ವಿಡಿಯೋ ಗೇಮನ್ನು ಆಡುತ್ತಿರಬಾರದೇಕೆ?' ಎಂದು ಯಾರಾದರೂ ನನ್ನನ್ನು ಹಳಿದರೆ, ನನಗಷ್ಟು ಸಮಾಧಾನ. ಆತ್ಮಸ್ಥ ಸುಖದ ಅರಿವು ಯಾರಿಗೂ ಇಲ್ಲವೆಂದಮೇಲೆ, ಇತರರ ಸುಖದ ಆಯ್ಕೆಯನ್ನು ಪ್ರಶ್ನಿಸುವ, ವಿಶ್ಲೇಷಿಸುವ ಹಕ್ಕು ನನಗೆಲ್ಲಿದೆ? ●

**ಈ ಬರಹದೊಂದಿಗೆ 'ಇಮೋಜಿ ಭಾಷೆ' ಅಂಕಣ ಕೊನೆಗೊಂಡಿದೆ. –ಸಂ**